ದಿ: **01-07-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು : ವಾದಿ ಪರ ವಕೀಲರಾದ ಶ್ರೀ ಎಂ.ಎಂ.ಹರೀಶ್ ರವರಿಂದ**

ನಾನು ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ಏಳನೇ ತರಗತಿ ಅನುತ್ತೀರ್ಣನಾಗಿದ್ದೇನೆ. ನನಗೆ ಕನ್ನಡ ಭಾಷೆಯನ್ನು ನಿಧಾನವಾಗಿ ಓದಲು ಬರುತ್ತದೆ. ನಾನು ಸಜ್ಜೆ, ಮೆಕ್ಕೆಜೋಳ ಮತ್ತು ಕೋಳಿ ಮೊಟ್ಟೆ ವ್ಯಾಪಾರ ಮಾಡುತ್ತೇನೆ. ನಾನು ಕೊಪ್ಪಳದಲ್ಲಿರುವ ಎ.ಪಿ.ಎಂ.ಸಿ ಯಾರ್ಡ್ ನಲ್ಲಿರುವ "ಎಂ.ಎ ಟ್ರೇಡರ್ಸ್" ಹೆಸರಿನಲ್ಲಿ 2017ರಿಂದ ವ್ಯಾಪಾರ ಮಾಡುತ್ತಿದ್ದೇನೆ. ಕೋಳಿ ಮೊಟ್ಟೆಯನ್ನು ನಾನು ದಾವಣಗೆರೆ, ಹೊಸಪೇಟೆ, ಬಳ್ಳಾರಿ, ತಮಿಳುನಾಡು, ಆಂದ್ರ ಕಡೆಯಿಂದ ಸುಮಾರು 30-40 ಕಡೆಯಿಂದ ಖರೀದಿ ಮಾಡುತ್ತೇನೆ.

**2)** ಕೊಪ್ಪಳದ ಗಿಣಿಗೆರೆಯಲ್ಲಿರುವ ರೇಣುಕಾ ಕೋಳಿ ಫಾರಂ, ದಾವಣಗೆರೆಯಲ್ಲಿರುವ ಬಿ.ಎಸ್.ಆರ್ ಕೋಳಿ ಫಾರಂ ಮತ್ತು ಎಂ.ಆರ್.ಎಂ ಕೋಳಿ ಫಾರಂ ನ ಜೊತೆ 2017ರಿಂದ ನಾನು ವ್ಯಾಪಾರ ಮಾಡುತ್ತಿದ್ದೇನೆ. ಕಳೆದ 5-6 ವರ್ಷಗಳಿಂದ ಬಳ್ಳಾರಿಯ ಕಲ್ಯಾಣಿ ಕೋಳಿ ಫಾರಂ ನ ಜೊತೆ ಸಹ ವ್ಯಾಪಾರ ಮಾಡುತ್ತಿದ್ದೇನೆ. ಕರಮತ್ತುಲ್ಲಾ ಎನ್ನುವವರು ವೆಂಕಟೇಶ್ವರ ಕೋಳಿ ಫಾರಂ ನಡೆಸುತ್ತಿದ್ದು ಅವರ ಜೊತೆ ಸಹ 2017 ಸಾಲಿನಿಂದ ವ್ಯಾಪಾರ ಮಾಡುತ್ತಿದ್ದೇನೆ. ವಾದಿಯು ವಿಜಯ ಟ್ರೇಡಿಂಗ್ ಕಂಪನಿ ಎನ್ನುವ ಹೆಸರಿನಲ್ಲಿ ಗುಜುರಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರು ಕೋಳಿ ಮೊಟ್ಟೆ ವ್ಯಾಪಾರ ಸಹ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಕೋಳಿ ಮೊಟ್ಟೆ ವ್ಯಾಪಾರ ಮಾಡಲು ಲೈಸೆನ್ಸ್ ಪಡೆಯಬೇಕು ಎಂದರೆ ಸರಿಯಲ್ಲ. ವಾದಿ ಗುಜರಿ ವ್ಯಾಪಾರ ಮಾತ್ರ ಮಾಡುತ್ತಿದ್ದಾರೆ, ಕೋಳಿ ಮೊಟ್ಟೆ ವ್ಯಾಪಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

**3)** ದಾವಾ ಆಸ್ತಿಯನ್ನು ನಾನು ಸದರಿ ಕರಮತ್ತುಲ್ಲಾನ ಹೆಂಡತಿಯಾದ ಬಿ.ಬಿ. ಶಮಾ ಕಡೆಯವರಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿ. ಕರಾರಿನ ಸಂದರ್ಭದಲ್ಲಿ ದಾವಾ ಆಸ್ತಿಯಲ್ಲಿ ಶೆಡ್ ಇತ್ತು ಎಂದರೆ ಸರಿ. ಗುಜರಿ ವ್ಯಾಪಾರ ಮಾಡುವ ಉದ್ದೇಶದಿಂದ ಮಂಗಳೂರಿನ ಬಂದರಿನಲ್ಲಿ ಖರೀದಿ ಮಾಡುವ ಹಳೆಯ ಕಂಟೈನರ್ ಗಳನ್ನು ಇಡುವ ಸಲುವಾಗಿ ದಾವಾ ಆಸ್ತಿಯನ್ನು ಖರೀದಿ ಮಾಡಲು ವಾದಿ ಕರಾರು

ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಿಖಿತ ಹೇಳಿಕೆ ಸಲ್ಲಿಸುವ ಸಮಯದಲ್ಲಿ ಕರಾರಿನ ಬಗ್ಗೆ ನಮ್ಮ ವಕೀಲರಿಗೆ ಹೇಳಿದ್ದೆನೋ ಅಥವಾ ಇಲ್ಲವೋ ನೆನಪಿಲ್ಲ. ಕರಾರಿನ ನಕಲನ್ನು ವಕೀಲರಿಗೆ ನೀಡಿರುತ್ತೇನೆ.

**4)** ಕರಾರನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ರೂ.48,27,305/- ಗಳನ್ನು ಯಾರು ಯಾರಿಗೆ ಪಾವತಿ ಮಾಡಬೇಕು ಎನ್ನುವ ವಿವರವನ್ನು ಕರಾರಿನಲ್ಲಿ ಬರೆಯಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಮಾಹಿತಿಗಳು ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ಕರಾರಿನ ಪೂರ್ವದಲ್ಲೇ ಸದರಿ ರೂ.48,27,305/- ಮೊತ್ತವು ಐದಾರು ಜನರ ಖಾತೆಗಳಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. ದಿನಾಂಕ 24-09-2021ರಂದು ರೂ.20,00,000/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 27-09-2021ರಂದು ರೂ.1,49,400/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 27-09-2021ರಂದು ರೂ.10,66,965/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 27-09-2021ರಂದು ರೂ.5,41,200/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 30-09-2021ರಂದು ರೂ.5,71,400/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 28-09-2021ರಂದು ರೂ.4,00,000/- ಯಾರ ಖಾತೆಗೆ ವರ್ಗಾವಣೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

**5)** ಕರಾರು ಪತ್ರದಲ್ಲಿ ನಮೂದಿಸಿರುವ ಯಾವುದೇ ಮೊತ್ತ ನನ್ನ ಖಾತೆಗೆ ವರ್ಗಾವಣೆಯಾಗಿರುವುದಿಲ್ಲ. ನಿ.ಪಿ - 1 ಕ್ರಯದ ಕರಾರು ಪತ್ರವನ್ನು ನಾನು ನೀಡಿದ ಮಾಹಿತಿಯ ಮೇರೆಗೆ ತಯಾರು ಮಾಡಲಾಗಿದೆ ಮತ್ತು ನನ್ನ ಸೂಚನೆಯ ಪ್ರಕಾರ ಹಣವು ಬೇರೆಯವರ ಖಾತೆಗಳಿಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ.

**6)** ಯಾವುದೇ ದಾಖಲೆಗಳಿಗೆ ಓದದೇ ಸಹಿ ಮಾಡಬಾರದು ಎನ್ನುವುದು ನನಗೆ ಗೊತ್ತಿದೆ. ದಾವೆ ಸಲ್ಲಿಸುವ ಪೂರ್ವದಲ್ಲಿ ವಾದಿಯು ತನ್ನ ವಕೀಲರ ಮುಖಾಂತರ ನನಗೆ ನೀಡಿರುವ ನೋಟೀಸ್ಸಿಗೆ ನಾನು ಉತ್ತರ ನೀಡಿರುವುದಿಲ್ಲ. ನೋಟೀಸ್ ಜಾರಿಯಾದ ನಂತರ ನಾನು ವಾದಿಯನ್ನು ಭೇಟಿ ಮಾಡಿರುತ್ತೇನೆ. ಹಣವನ್ನು

ವಾಪಸ್ಸು ಮಾಡಲು ಎಂದು ನಾನು ಹೇಳಿರುವುದಿಲ್ಲ. ವಾದಿಯ ನೋಟೀಸ್ಸಿಗೆ ಉತ್ತರ ಕೊಡಲು ನನಗೆ ತೊಂದರೆ ಇರಲಿಲ್ಲ.

**7)** ವಾದಿ ಮತ್ತು ನನ್ನ ನಡುವೆ ಯಾವುದೋ ಬಾಕಿ ಹಣ ಸಂದಾಯ ಮಾಡುವ ಕುರಿತು ಒಂದು ಕರಾರು ಮಾಡಿಕೊಳ್ಳುವ ಉದ್ದೇಶದಿಂದ ವಾದಿ ನನ್ನನ್ನು ಕುಂದಾಪುರಕ್ಕೆ ಕರೆಸಿ ನಿ.ಪಿ - 1ಕ್ಕೆ ಸಹಿ ಮಾಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲ. ನನ್ನ ಮತ್ತು ವಾದಿ ನಡುವೆ ಡೀಲಿಂಗ್ಸ್ ಇರುತ್ತದೆ. ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ವಾದಿ ಪರವಾಗಿ ಕರಾರು ಪತ್ರವನ್ನು ಬರೆದುಕೊಟ್ಟು ಹಣವನ್ನು ಬೇರೆಯವರ ಖಾತೆಗಳಿಗೆ ವರ್ಗಾವಣೆ ಮಾಡಿಸಿದ್ದರೂ ಸಹ ಈಗ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಣಕಾಸಿನಲ್ಲಿ ಸ್ಥಿತಿವಂತರು ಎಂದರೆ ಸರಿ. ಉಳಿದ ರೂ.1,72,695/- ನ್ನು ಪಾವತಿ ಮಾಡಿ ನನ್ನಿಂದ ನೊಂದಾಯಿತ ಕ್ರಯ ಪತ್ರ ಬರೆಸಿಕೊಳ್ಳಲು ವಾದಿ ಯಾವಾಗಲೂ ಸಿದ್ಧನಿದ್ದಾನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನಾನೇ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**